ಶ್ರೀ ಬಿ. ರಾಚಯ್ಯ (ಗೃಹಸಚಿವರು) —

ಅ) ಹೌದು. ಸೋಮವಾರಪೇಟೆ, ಶನಿವಾರಸಂತೆ, ಹುಡಿಕೇರಿ, ಶ್ರೀವಂಗಲ, ಕಂಟ್ಟಿ ತಿತ್ತಿಮತ್ತಿ ಇವುಗಳನ್ನು ಬಿಟ್ಟು ಉಳಿದೆಡೆಯಲ್ಲೆಲ್ಲಾ ಬಂದ್ ಆಚರಿಸಲಾಯಿತು.

ಆ) ದಿನಾಂಕ ೬-೭-೧೯೮೬ ರಿಂದ ೧೬-೭-೧೯೮೬ರ ವರೆಗೆ ಕಲಂ ೧೪೪ನೇ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಮಡಿಕೇರಿ ಹಾಗೂ ಸುತ್ತ ಮುತ್ತ ೧೦ ಕಿ. ಮೀ. ಪಾಸಲೆಯಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಗಿತ್ತು, ಹಾಗೂ ಎಲ್ಲಾ ವಿಧವಾದ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳಲಾಗಿತ್ತು.

ಇ) ದಿನಾಂಕ ೬-೭-೧೯೮೬ರ ರಾತ್ರಿ ಪಹರೆಯನ್ನು ಇಡಲಾಗಿದ್ದರೂ ಸಹ ದುಷ್ಕರ್ಮಿಗಳು ತೋಟಗಳಿಗೆ ಸೇರಿರುವಂತಹ ರಸ್ತೆ ಬದಿಯ ಮರಗಳನ್ನು ಕಡಿದು ರಸ್ತೆಗೆ ಅಡ್ಡಲಾಗಿ ಇಡಲಾಗಿತ್ತು. ಸಂಚಿವು ಸಿಕ್ಕಿದಾಕ್ಷಣ ಪೋಲೀಸರು ಸ್ಥಳಕ್ಕೆ ಧಾವಿಸಿ ವಾಹನಗಳ ಸಂಚಾರಕ್ಕೆ ತಡೆಯಾಗಿದ್ದ ಮರದ ತುಂಡು ಗಳನ್ನು ತೆಗೆದು ಪೋಲೀಸ್ ಪಹರೆಯನ್ನು ಹೆಚ್ಚಿಸಿ ಮುಂದೆ ಇಂತಹ ಕೃತ್ಯ ನಡೆಯದಂತೆ ಕ್ರಮ ಕೈಗೊಳ್ಳಲಾಯಿತಲ್ಲದೆ ದುಷ್ಕೃತ್ಯವನ್ನೆಸಗಿದವರ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ.

ಬೀಳಗಿಯಲ್ಲಿ ನ್ಯಾಯಾಲಯ ಸ್ಥಾಪನೆ ವಿಚಾರ

೩೬೯. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ತಾಲ್ಲೂಕಾ ಕೇಂದ್ರಗಳಲ್ಲಿ ಈವರೆಗೆ ನ್ಯಾಯಾಲಯಗಳು ಸ್ಥಾಪನೆಯಾಗದೆ ಉಳಿದಿದೆ ?

ಆ) ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿಗೆ ನ್ಯಾಯಾಲಯ ಒಂದರ ಅವಶ್ಯಕತೆಯಿದೆಯೆಂಬುದರ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು).—

(ಅ) ೩೪ ತಾಲ್ಲೂಕುಗಳು

(ಆ) ಹೌದು.

(ಇ) ಈ ವಿಷಯವು ಉಚ್ಚ ನ್ಯಾಯಾಲಯದ ಪರ್ಯಾಲೋಚನೆಯೊಂದಿಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಮಂಜೂರಾಗಿರುವ ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಬಗ್ಗೆ

೧೬೭; ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಂಜೂರಾಗಿರುವ ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಎಷ್ಟನ್ನು ಭರ್ತಿ ಮಾಡಲಾಗಿದೆ

ಇ) ರಾಜ್ಯದ ಅನೇಕ ತಾಲ್ಲೂಕುಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ೩-೪ ವರ್ಷಗಳಿಂದ ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಖಿಂಖಿ

ಆ) ಳಟಿಟ

ಇ) ಬಂದಿದೆ.

ಈ) ದಿನಾಂಕ ೬-೧೨-೧೯೮೫ರಲ್ಲಿ ೧೧೦ ಮಹಿಳಾ ವೈದ್ಯಾಧಿಕಾರಿಗಳನ್ನು ಮತ್ತು ೧೭-೭-೧೯೮೬ರಲ್ಲಿ ೪೦ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ.

ಶಾಹಾಬಾದ್‌ನಲ್ಲಿ ಜೆ.ಎಂ.ಎಫ್.ಸಿ. ಕಟ್ಟಡದ ಬಗ್ಗೆ.

೨೦೬ ಶ್ರೀ ಕೆ. ಬಿ. ಶಾಣಪ್ಪ (ಶಾಹಾಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಚಿತ್ತಾಪುರ ಜೆ. ಎಂ. ಎಫ್. ಸಿ.ಯು ನ್ಯಾಯಾಧೀಶರು ವಾರದ ಎರಡು ದಿನಗಳಲ್ಲಿ ಶಾಹಾಬಾದ್‌ನಲ್ಲಿ ವಿಚಾರಣೆಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವಿಚಾರಣೆ ಸಭೆ ಕೆಲವು ತಿಂಗಳುಗಳಿಂದ ನಿಂತೋಗಿರುವುದಕ್ಕೆ ಕಾರಣವೇನು?

ಇ) ಶಾಹಾಬಾದ್‌ನಲ್ಲಿ ಒಂದು ಜೆ. ಎಂ. ಎಫ್. ಸಿ.ಯ ಹೊಸ ಕಟ್ಟಡ ಮತ್ತು ಸಿಬ್ಬಂದಿ ಕಟ್ಟಡಗಳನ್ನು ಕಟ್ಟುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ? ಹಾಗಿದಲ್ಲಿ, ಅದನ್ನು ಯಾವ ವರ್ಷದಿಂದ ಕಾರ್ಯರೂಪದಲ್ಲಿ ತರಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಈಗಿರುವ ನ್ಯಾಯಾಲಯ ಕಟ್ಟಡವು ಸೋರುತ್ತದೆ ಮತ್ತು ಸರಿದಿ ಕಟ್ಟಡದಲ್ಲಿ ನ್ಯಾಯಾಲಯವನ್ನು ನಡೆಸುವುದು ಸುರಕ್ಷಿತವಲ್ಲ.

ಇ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕಳ್ಳಬಟ್ಟಿ ಪ್ರಕರಣಗಳ ಪತ್ತೆ ಹಚ್ಚುವಿಕೆ

೧೯೬. ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ದಯೆಯಿಟ್ಟು ಉತ್ತರಿಸಂವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೪-೮೫, ೧೯೮೫-೮೬, ರಲ್ಲಿ ಪತ್ತೆ ಹಚ್ಚಿದ ಕಳ್ಳಬಟ್ಟಿ ಪ್ರಕರಣಗಳೆಷ್ಟು ?

ಆ) ಎಷ್ಟು ಕಳ್ಳಬಟ್ಟಿ ನಾಶಮಾಡಲಾಗಿದೆ, ಎಷ್ಟು ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ?

ಇ) ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ? ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಈ) ಈ ಕಳ್ಳಬಟ್ಟಿ ನಿರ್ಮೂಲನಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?